KHC
Civil Judge

Previous Year Paper

Mains (Law Paper-II) 08 Oct, 2022

HIGH COURT OF KARNATAKA

ಕರ್ನಾಟಕ ಉಚ್ಚ ನ್ಯಾಯಾಲಯ

CIVIL JUDGE MAIN WRITTEN EXAMINATION 2022

ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ 2022

LAW PAPER II

ಕಾನೂನು ಪತ್ರಿಕೆ – II

Framing of Issues and writing Judgment in Civil Cases

ಸಿವಿಲ್ ಪ್ರಕರಣಗಳಲ್ಲಿ ವಿವಾದಾಂಶ ರೂಪಿಸುವುದು ಮತ್ತು ತೀರ್ಪು ಬರೆಯುವುದು

Date: 08.10.2022
ದಿನಾಂಕ: 08.10.2022

Max. Marks: 100
ಗರಿಷ್ಠ ಅಂಕಗಳು: 100

Time: 10.00 AM to 1.00 PM
ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ

Instructions:
ಸೂಚನೆಗಳು:

1. Option is given to the candidates to write answers either in English or in Kannada.

   ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ.

2. If there is any discrepancy or difference in the questions in English language and Kannada language, questions as framed in English language shall prevail.

   ಒಂದು ವೇಳೆ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆಗಳಲ್ಲಿರುವ ಪ್ರಶ್ನೆಗಳ ನಡುವೆ ಯಾವುದೇ ಲೋಪ ಅಥವಾ ವ್ಯತ್ಯಾಸ ಕಂಡುಬಂದಲ್ಲಿ, ಆಂಗ್ಲ ಭಾಷೆಯಲ್ಲಿ ರೂಪಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

3. Write your register number only on the cover page in the space provided in your answer book and nowhere else. You shall not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

   ನಿಮ್ಮ ರಿಜಿಸ್ಟರ್ ನಂಬರನ್ನು ಉತ್ತರ ಪತ್ರಿಕೆಯ ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

1. Frame proper issues on the basis of following pleadings.
Marks:10

GIST OF PLAINT

The plaintiff entered into an agreement to sell with the defendant in respect of a residential house bearing House No.428/7, situated at Sadashiva Nagara, Belagavi, to purchase the same for Rs.50,00,000/- and paid the sale advance of Rs.10,00,000/-to the defendant, vide sale agreement dated 10.09.2013. On 23.03.2015 plaintiff and defendant mutually agreed to cancel the said sale agreement and refund the sale advance. At the time of cancellation of sale agreement, defendant repaid a sum of Rs.7,40,000/- to the plaintiff, out of sale advance amount of Rs.10,00,000/- and executed an acknowledgment of debt on 23.03.2015, by agreeing to repay the balance amount of Rs.2,60,000/- within one year with interest at the rate of 12% per annum. Inspite of repeated request and issuance of legal notice, defendant failed to repay the said amount. On the date of filing the suit, a sum of Rs.4,45,000/- is due from the defendant, including the interest.

With these pleadings, plaintiff claimed a decree for recovery of Rs.4,45,000/- from the defendant with interest at the rate of 12% per annum from the date of suit till realization of entire decreetal amount.

GIST OF WRITTEN STATEMENT

The defendant, in his written statement, admitted the sale transaction between him and plaintiff, execution of sale agreement dated 10.09.2013 and receiving Rs.10,00,000/- from the plaintiff as sale advance. The defendant also admitted the mutual agreement between them to cancel the sale transaction. The defendant denied

other plaint averment. According to the defendant, he has repaid entire sale advance amount of Rs.10,00,000/- to the plaintiff on 23.03.2015 and not due to pay any amount. The defendant further contended that for cancellation of sale agreement, his signatures were obtained on blank papers and by fraud and misrepresentation acknowledgement of debt is created. As the cancellation of sale agreement is on 23.03.2015, suit filed in the year 2021 is barred by limitation. On all these grounds, defendant prayed for dismissal of the suit with costs.

ಈ ಕೆಳಗಿನ ವಾದ ಮತ್ತು ಪ್ರತಿವಾದ ಪತ್ರಗಳ ಆಧಾರದ ಮೇಲೆ ವಿವಾದಾಂಶಗಳನ್ನು ರೂಪಿಸಿ:

ಅಂಕಗಳು: 10

ವಾದಪತ್ರದ ಸಾರಾಂಶ

ವಾದಿಯು ಪ್ರತಿವಾದಿಯೊಂದಿಗೆ ಬೆಳಗಾವಿಯ ಸದಾಶಿವ ನಗರದಲ್ಲಿರುವ ಮನೆ ನಂ.428/7ರ ವಾಸದ ಮನೆಯನ್ನು ರೂ.50,00,000/–ಕ್ಕೆ ಖರೀದಿ ಮಾಡುವ ಬಗ್ಗೆ ಒಂದು ಖರೀದಿ ಕರಾರು ಮಾಡಿಕೊಂಡು ದಿನಾಂಕ 10.09.2013ರ ಖರೀದಿ ಕರಾರು ಪತ್ರದ ಮೂಲಕ ರೂ.10,00,000/–ವನ್ನು ಪ್ರತಿವಾದಿಗೆ ಮುಂಗಡ ಖರೀದಿ ಹಣವಾಗಿ ಕೊಟ್ಟಿದ್ದನು. ದಿನಾಂಕ 23.03.2015ರಂದು ವಾದಿ ಮತ್ತು ಪ್ರತಿವಾದಿ ಪರಸ್ಪರ ಒಪ್ಪಿಕೊಂಡು ಆ ಖರೀದಿ ಕರಾರನ್ನು ರದ್ದುಪಡಿಸಿ ಮುಂಗಡ ಖರೀದಿ ಹಣವನ್ನು ವಾಪಸ್ಸು ಕೊಡಲು ನಿರ್ಧರಿಸಿದರು. ಖರೀದಿ ಕರಾರನ್ನು ರದ್ದು ಪಡಿಸುವ ಕಾಲಕ್ಕೆ ಮುಂಗಡ ಖರೀದಿ ಹಣವಾದ ರೂ.10,00,000/–ದ ಪೈಕಿ ರೂ.7,40,000/–ವನ್ನು ಪ್ರತಿವಾದಿಯು ವಾದಿಗೆ ಮರುಪಾವತಿ ಮಾಡಿ ಬಾಕಿ ಉಳಿದ ರೂ.2,60,000/–ವನ್ನು ಒಂದು ವರ್ಷದ ಒಳಗಡೆ ವಾರ್ಷಿಕ ಶೇಕಡ 12ರ ಬಡ್ಡಿ ದರದಲ್ಲಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡು ದಿನಾಂಕ 23.03.2015ರಂದು ಒಂದು ಸಾಲದ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟರು. ಸಾಕಷ್ಟು ಬಾರಿ ವಿನಂತಿಸಿದ್ದರೂ ಮತ್ತು ನೋಟೀಸನ್ನು ಕೊಟ್ಟಿದ್ದರು ಕೂಡ ಪ್ರತಿವಾದಿಯು ಆ ಹಣವನ್ನು ಮರುಪಾವತಿ ಮಾಡಲು ವಿಫಲನಾಗಿದ್ದನು. ದಾವಾ ಸಲ್ಲಿಸುವ ದಿನದಂದು ಬಡ್ಡಿ ಹಣ ಸೇರಿಸಿ ಪ್ರತಿವಾದಿಯಿಂದ ರೂ.4,45,000/–ಹಣ ಬಾಕಿ ಇತ್ತು.

ವಾದ ಪತ್ರದಲ್ಲಿ ಈ ಮೇಲಿನ ವಿಷಯಗಳನ್ನು ನಮೂದಿಸಿ ವಾದಿಯು ಪ್ರತಿವಾದಿಯ ವಿರುದ್ಧ ರೂ.4,45,000/–ನ್ನು ದಾವಾ ದಿನದಿಂದ ಪೂರ್ತಿ ಡಿಕ್ರಿ ಹಣ ಮರುಪಾವತಿಯವರೆಗೆ ಶೇಕಡ 12ರ ಬಡ್ಡಿ ದರದಲ್ಲಿ ಮರುಪಾವತಿ ಮಾಡಲು ಡಿಕ್ರಿಯನ್ನು ಕೇಳಿದ್ದನು.

ಪ್ರತಿವಾದ ಪತ್ರದ ಸಾರಾಂಶ

ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ತನ್ನ ಮತ್ತು ವಾದಿಯ ನಡುವೆ ಖರೀದಿ ವ್ಯವಹಾರ ನಡೆದಿರುವುದನ್ನು ಮತ್ತು ದಿನಾಂಕ 10.09.2013ರಂದು ಖರೀದಿ ಕರಾರು ಪತ್ರ ಬರೆದುಕೊಟ್ಟಿರುವುದನ್ನು ಮತ್ತು ವಾದಿಯಿಂದ ರೂ.10,00,000/–ವನ್ನು ಮುಂಗಡ ಖರೀದಿ ಹಣವಾಗಿ ಸ್ವೀಕರಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿಯು ಆ ಖರೀದಿ ವ್ಯವಹಾರವನ್ನು ರದ್ದು ಪಡಿಸಲು ತಾವು ಪರಸ್ಪರ ತೀರ್ಮಾನಿಸಿರುವುದನ್ನು ಕೂಡ ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿಯು ವಾದ ಪತ್ರದ ಇತರ ವಿಷಯಗಳನ್ನು ಅಲ್ಲಗಳೆದಿರುತ್ತಾರೆ. ಪ್ರತಿವಾದಿಯ ಪ್ರಕಾರ ದಿನಾಂಕ 23.03.2015ರಂದು ಆತ ಮುಂಗಡ ಖರೀದಿ ಹಣವಾದ ರೂ.10,00,000/–ವನ್ನು ಪೂರ್ತಿಯಾಗಿ ವಾದಿಗೆ ಮರುಪಾವತಿ ಮಾಡಿದ್ದು ಯಾವುದೇ ಹಣ ಬಾಕಿ ಇಟ್ಟಿರುವುದಿಲ್ಲ. ಪ್ರತಿವಾದಿಯು ಮುಂದುವರಿದು ಖರೀದಿ ಕರಾರು ಪತ್ರವನ್ನು ರದ್ದು ಪಡಿಸುವ ಸಲುವಾಗಿ ಆತನ ಸಹಿಗಳನ್ನು ಕೆಲವು ಖಾಲಿ ಕಾಗದದ ಮೇಲೆ ಪಡೆದುಕೊಂಡು ಮೋಸದಿಂದ ಮತ್ತು ತಪ್ಪು ನಿರೂಪಣೆಯಿಂದ ಸಾಲ ಒಪ್ಪಿಗೆ ಪತ್ರವನ್ನು ಸೃಷ್ಟಿಸಲಾಗಿದೆ ಎನ್ನುತ್ತಾರೆ. ಖರೀದಿ ಕರಾರು ಪತ್ರವನ್ನು ದಿನಾಂಕ 23.03.2015ರಂದು ರದ್ದು ಪಡಿಸಿರುವುದರಿಂದ 2021ನೇ ಸಾಲಿನಲ್ಲಿ ಸಲ್ಲಿಸಿದ ದಾವೆ ಕಾಲಮಿತಿ ಬಾದೆಗೆ ಒಳಪಟ್ಟಿರುತ್ತದೆ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯು ದಾವಾವನ್ನು ಖರ್ಚು ಸಹಿತ ವಜಾ ಮಾಡಲು ಕೋರಿರುತ್ತಾರೆ.

2. Frame proper issues on the basis of following pleadings.
Marks: 15

GIST OF PLAINT

The plaintiff is the absolute owner of the suit 'A' schedule property, i.e. 2 acres 23 guntas in Sy.No.68 of Navile village of Chennarayapatna Taluk, having purchased the same from the defendant vide registered sale deed dated 02.04.2005. After selling 2 acres 23 guntas in Sy.No.68, defendant retained 1 acre 17 guntas with him, which is on the southern side of the suit 'A' schedule property. Recently when the plaintiff got measured the suit 'A'

schedule property, he came to know that the defendant has encroached 17 guntas of land on the southern side, which is described as the suit 'B' schedule property in the plaint. After encroachment of the suit 'B' schedule property, defendant has illegally put up the temporary shed and barbed wire fence. When the plaintiff requested the defendant to remove the encroachment and hand over the possession of the suit 'B' schedule property, defendant refused the same and denied the plaintiffs title over the suit 'A' schedule property, which made the plaintiff to file the present suit.

On all these grounds, plaintiff claimed a decree to declare him as the absolute owner of the suit 'A' schedule property and for mandatory injunction directing the defendant to remove the temporary shed and barbed wire fence put up in the suit 'B' schedule property and for vacant possession of the suit 'B' schedule property from the defendant.

GIST OF WRITTEN STATEMENT

The defendant, in his written statement, denied all the plaint averments, including the plaintiffs title and ownership over suit 'A' schedule property, alleged encroachment of suit 'B' schedule property by the defendant and he illegally putting up the temporary shed and barbed fence. According to the defendant, he has sold 2 acres 06 guntas land, out of 4-00 acres in Sy.No.68 to the plaintiff and retained 2 acres 34 guntas with him. In the sale deed dated 02.04.2005, the plaintiff has wrongly shown the measurement of the property sold to him as 2 acres 23 guntas, instead of 2 acres 06 guntas. The suit 'B' schedule property was not sold to the plaintiff and it has been in possession and enjoyment of the defendant. In

the alternative, defendant contended that he has acquired title over the suit 'B' schedule property by adverse possession, because of his continuous, uninterrupted and hostile possession. The defendant further contended that vide sale deed dated 17.07.2014, he has sold 2 acres 34 guntas in Sy.No.68 to one Joseph D Souza and handed over the possession to him. Hence, said Joseph D Souza is a necessary party to this suit. The defendant further contended that suit is not properly valued and requisite Court fee is not paid on the plaint. On all these grounds, defendant prayed for dismissal of the suit with costs.

ಈ ಕೆಳಗಿನ ವಾದ ಮತ್ತು ಪ್ರತಿವಾದ ಪತ್ರಗಳ ಆಧಾರದ ಮೇಲೆ ವಿವಾದಾಂಶಗಳನ್ನು ರೂಪಿಸಿ:

ಅಂಕಗಳು: 15

ವಾದಪತ್ರದ ಸಾರಾಂಶ

ವಾದಿಯು ದಿನಾಂಕ 02.04.2005ರ ಸೊಂದಾಯಿತ ಖರೀದಿ ಪತ್ರದ ಮೂಲಕ ದಾವಾ ಎ ಷೆಡ್ಯೂಲ್ ಆಸ್ತಿ ಅಂದರೆ ಚನ್ನರಾಯಪಟ್ಟಣ ತಾಲೂಕು ನವಿಲೆ ಗ್ರಾಮದ ಸರ್ವೆ ನಂ.68ರಲ್ಲಿನ 2 ಎಕರೆ 23 ಗುಂಟೆ ಜಮೀನನ್ನು ಪ್ರತಿವಾದಿಯಿಂದ ಖರೀದಿಸಿ ಅದರ ಸಂಪೂರ್ಣ ಮಾಲೀಕರಾಗಿರುತ್ತಾನೆ. ಪ್ರತಿವಾದಿಯು ಸರ್ವೆ ನಂ.68ರಲ್ಲಿ 2 ಎಕರೆ 23 ಗುಂಟೆ ಜಮೀನನ್ನು ಮಾರಾಟ ಮಾಡಿ ದಾವಾ ಎ ಷೆಡ್ಯೂಲ್ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿ 1 ಎಕರೆ 17 ಗುಂಟೆಯನ್ನು ತನ್ನ ಬಳಿ ಇಟ್ಟುಕೊಂಡಿದ್ದನು. ಇತ್ತೀಚೆಗೆ ವಾದಿಯು ದಾವಾ ಎ ಷೆಡ್ಯೂಲ್ ಆಸ್ತಿಯನ್ನು ಮೋಜಣಿ ಮಾಡಿಸಿದಾಗ ಪ್ರತಿವಾದಿಯು ದಕ್ಷಿಣ ಭಾಗದ 17 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದು ಕಂಡು ಬಂದಿದ್ದು ಅದನ್ನು ವಾದಪತ್ರದಲ್ಲಿ ದಾವಾ ಬಿ ಷೆಡ್ಯೂಲ್ ಆಸ್ತಿಯೆಂದು ವಿವರಿಸಲಾಗಿದೆ. ದಾವಾ ಬಿ ಷೆಡ್ಯೂಲ್ ಆಸ್ತಿಯನ್ನು ಒತ್ತುವರಿ ಮಾಡಿದ ಬಳಿಕ ಪ್ರತಿವಾದಿಯು ಅದರಲ್ಲಿ ಅಕ್ರಮವಾಗಿ ತಾತ್ಕಾಲಿಕ ಷೆಡನ್ನು ನಿರ್ಮಿಸಿ ಅದಕ್ಕೆ ತಂತಿ ಬೇಲಿಯನ್ನು ಹಾಕಿರುತ್ತಾನೆ. ವಾದಿಯು ಪ್ರತಿವಾದಿಗೆ ಆ ಒತ್ತುವರಿಯನ್ನು ತೆರವುಗೊಳಿಸಿ ದಾವಾ ಬಿ ಷೆಡ್ಯೂಲ್ ಆಸ್ತಿಯ ಸ್ವಾಧೀನವನ್ನು ಕೊಡಬೇಕು ಎಂದು ಕೇಳಿದಾಗ ಪ್ರತಿವಾದಿಯು ನಿರಾಕರಿಸಿ ದಾವಾ ಎ ಷೆಡ್ಯೂಲ್ ಆಸ್ತಿಯ ಮೇಲೆ ವಾದಿಯ ಮಾಲೀಕತ್ವವನ್ನು ನಿರಾಕರಿಸಿದ್ದರಿಂದ ವಾದಿಯು ಈ ದಾವಾವನ್ನು ಮಾಡಬೇಕಾಯಿತು.

ಈ ಎಲ್ಲಾ ಕಾರಣಗಳಿಂದ ವಾದಿಯು ತನ್ನನ್ನು ದಾವಾ ಎ ಷೆಡ್ಯೂಲ್ ಆಸ್ತಿಯ ಸಂಪೂರ್ಣ ಮಾಲೀಕ ಎಂದು ಘೋಷಿಸಿ ದಾವಾ ಬಿ ಷೆಡ್ಯೂಲ್ ಆಸ್ತಿಯಲ್ಲಿ ಹಾಕಿರುವ ತಾತ್ಕಾಲಿಕ ಶೆಡ್ಡು ಮತ್ತು ತಂತಿ ಬೇಲಿಯನ್ನು ತೆಗೆದುಹಾಕಲು ಪ್ರತಿವಾದಿಗೆ ನಿರ್ದೇಶನ ಕೋರಿ ಆಜ್ಞಾಪಕ ನಿರ್ಭಂದಕಾಜ್ಞೆಯನ್ನು ಮತ್ತು ಪ್ರತಿವಾದಿಯಿಂದ ದಾವಾ ಬಿ ಷೆಡ್ಯೂಲ್ ಆಸ್ತಿಯ ಸ್ವಾಧೀನಕ್ಕಾಗಿ ಡಿಕ್ರಿ ಕೇಳಿರುತ್ತಾನೆ.

<u>ಪ್ರತಿವಾದ ಪತ್ರದ ಸಾರಾಂಶ</u>

ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ದಾವಾ ಎ ಷೆಡ್ಯೂಲ್ ಆಸ್ತಿಯ ಮೇಲೆ ವಾದಿಯ ಒಡೆತನ ಮತ್ತು ಮಾಲೀಕತ್ವವನ್ನು, ಪ್ರತಿವಾದಿಯು ದಾವಾ ಬಿ ಷೆಡ್ಯೂಲ್ ಆಸ್ತಿಯನ್ನು ಒತ್ತುವರಿ ಮಾಡಿರುವುದನ್ನು ಮತ್ತು ಅಕ್ರಮವಾಗಿ ತಾತ್ಕಾಲಿಕ ಶೆಡ್ಡು ಮತ್ತು ತಂತಿ ಬೇಲಿ ಹಾಕಿರುವುದನೆಲ್ಲಾ ಸೇರಿಸಿ ವಾದ ಪತ್ರದ ಎಲ್ಲಾ ಅಂಶಗಳನ್ನು ನಿರಾಕರಿಸಿರುತ್ತಾರೆ. ಪ್ರತಿವಾದಿಯ ಪ್ರಕಾರ ಸರ್ವೆ ನಂ.68ರ 4 ಎಕರೆ ಜಮೀನಿನ ಪೈಕಿ 2 ಎಕರೆ 6 ಗುಂಟೆಯನ್ನು ವಾದಿಗೆ ಮಾರಾಟ ಮಾಡಿ 2 ಎಕರೆ 34 ಗುಂಟೆಯನ್ನು ತನ್ನ ಬಳಿ ಇಟ್ಟುಕೊಂಡಿದ್ದನು. ದಿನಾಂಕ 02.04.2005ರ ಖರೀದಿ ಪತ್ರದಲ್ಲಿ ಆತನಿಗೆ ಮಾರಾಟ ಮಾಡಿದ ಜಮೀನಿನ ವಿಸ್ತೀರ್ಣವನ್ನು 2 ಎಕರೆ 6 ಗುಂಟೆಯ ಬದಲಾಗಿ 2 ಎಕರೆ 23 ಗುಂಟೆಯೆಂದು ವಾದಿಯು ತಪ್ಪಾಗಿ ನಮೂದಿಸಿದ್ದನು. ದಾವಾ ಬಿ ಷೆಡ್ಯೂಲ್ ಆಸ್ತಿಯು ವಾದಿಗೆ ಮಾರಾಟವಾಗಿರುವುದಿಲ್ಲ ಮತ್ತು ಅದು ಪ್ರತಿವಾದಿಯ ಸ್ವಾಧೀನ ಅನುಭವದಲ್ಲಿ ಇರುತ್ತದೆ. ಪ್ರತಿವಾದಿಯು ತಾನು ದಾವಾ ಬಿ ಷೆಡ್ಯೂಲ್ ಆಸ್ತಿಯನ್ನು ಸತತವಾಗಿ, ಯಾವುದೇ ತಕರಾರು ಇಲ್ಲದೆ ಮತ್ತು ಪ್ರತಿಕೂಲವಾಗಿ ಸ್ವಾಧೀನ ಹೊಂದಿರುವುದರಿಂದ ಅದಕ್ಕೆ ಪ್ರತಿಕೂಲ ಸ್ವಾಧೀನದ ಮೂಲಕ ಮಾಲೀಕತ್ವವನ್ನು ಗಳಿಸಿರುವುದಾಗಿ ಪರ್ಯಾಯವಾಗಿ ಸಾಧಿಸುತ್ತಾರೆ. ಪ್ರತಿವಾದಿಯು ಮುಂದುವರಿದು ದಿನಾಂಕ 17.07.2014ರ ಖರೀದಿ ಪತ್ರದ ಮೂಲಕ ಸರ್ವೆ ನಂ.68ರಲ್ಲಿನ 2 ಎಕರೆ 34 ಗುಂಟೆ ಜಮೀನನ್ನು ಓರ್ವ ಜೊಸೆಫ್ ಡಿಸೊಜ ಎನ್ನುವವರಿಗೆ ಮಾರಾಟ ಮಾಡಿ ಅದರ ಸ್ವಾಧೀನವನ್ನು ಅವರಿಗೆ ಹಸ್ತಾಂತರಿಸಿದ್ದೇನೆ ಎನ್ನುತ್ತಾರೆ. ಆ ಕಾರಣದಿಂದ ಸದರಿ ಜೋಸೆಫ್ ಡಿಸೋಜ ಈ ದಾವೆಗೆ ಅವಶ್ಯಕ ಪಕ್ಷಗಾರರು ಎನ್ನುತ್ತಾರೆ. ಪ್ರತಿವಾದಿಯು ಮುಂದುವರಿದು ಈ ದಾವೆಯನ್ನು ಸರಿಯಾಗಿ ಮೌಲ್ಯಮಾಪನ ಮಾಡಿಲ್ಲ ಮತ್ತು ನಿಗದಿತ ನ್ಯಾಯಾಲಯದ ಶುಲ್ಕವನ್ನು ವಾದಪತ್ರದೊಂದಿಗೆ ಪಾವತಿ ಮಾಡಿಲ್ಲ ಎನ್ನುತ್ತಾರೆ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯು ಈ ದಾವಾವನ್ನು ಖರ್ಚು ಸಹಿತ ವಜಾ ಮಾಡಲು ಕೋರಿರುತ್ತಾರೆ.

3. Write a Judgment on the basis of following pleadings, oral and documentary evidence, by giving valid and cogent reasons:

(Provision of law, which have been kept blank, shall be stated in the judgment)

Marks: 75

PLAINT

The suit property described in the plaint schedule is 08 guntas of land with two storied residential house in Sy.No.24/5 of Navanagara, Bagalkot. The plaintiff is the married daughter of Late Ranganna and younger sister of the defendant No.1 and 2. The plaintiffs' marriage was performed on 17.06.2002. Their family was owning ancestral property measuring 3 acres in Mudhol Taluk and plaintiffs father Ranganna and these defendants have jointly sold the same vide sale deed dated 21-12-2002. From the said sale proceeds, the suit property was purchased by their father Ranganna, vide sale deed dated 25.07.2003 and the suit property is their joint family property. Father of the plaintiff and defendants Ranganna died on 31.10.2011. After the death of their father, defendants have entered their name in the revenue records of the suit property on the basis of the Will dated 27.09.2011. The alleged Will dated 27.09.2011 is created and concocted by the defendants, just few days before the death of their father, to grab the suit property. The plaintiff requested the defendants for partition and separate possession of her share over the suit property. The defendants have refused to allot the plaintiffs share, which made her to file the present suit.

On all these grounds, plaintiff claimed a decree for partition and separate possession of her 1/3rd share over the suit property.

WRITTEN STATEMENT

The defendant No.1 and 2, in their written statement, admitted the relationship between them and denied other plaint averments about the suit property as their joint family property and plaintiff having share over the same. According to the defendants, to perform the marriage of this plaintiff in the year 2002, their father borrowed the hand loan from his friends and to repay the said loan, they have sold their ancestral property in Mudhol Taluk. The defendants father Ranganna was working as a primary school teacher and retired during April 2003. From his retirement benefits and from his own earnings, defendants father purchased the suit property vide sale deed dated 25.07.2003. The suit property was the self acquired property of father of plaintiff and defendants Ranganna. The defendants have looked after their father and out of his love and affection, he bequeathed the suit property in favour of the defendants vide registered Will dated 27.09.2011. After the death of their father, revenue records of the suit property changed in the names of these defendants on the basis of the Will dated 27.09.2011 and they are enjoying the suit property as its absolute owners. The plaintiff has no right, title, interest and share over the suit property. On all these grounds, defendants prayed for dismissal of the suit with costs.

ISSUES

1. **Whether the plaintiff proves that the suit property is their joint family property and that she has got right to claim share over the same?**

2. **Whether the defendants prove that the suit property is the self acquired and absolute property of their father, Ranganna?**

3. **Whether the defendants prove that their father, Ranganna has executed a registered will dated 27.09.2011 bequeathing the suit property in their favour and thereby, they became the absolute owners of the suit property?**

4. **Whether the plaintiff is entitled for a decree for partition and separate possession of her share over the suit property?**

5. **What order or decree?**

EVIDENCE ON BEHALF THE PLAINTIFF:

The plaintiff, who was examined as PW.1, deposed about the relationship between the parties and suit property is their joint family property, as their father, Ranganna purchased the same by selling the ancestral properties situated at Mudhol. PW.1 further deposed that she has got legitimate share in the suit property as the daughter of Late Ranganna and defendants had refused to allot her share, inspite of repeated request and demands made by her. PW.1 further deposed that the Will relied upon by the defendants, said to have been executed by her their father Ranganna, was created and concocted by the defendants, in order to grab the suit property. PW.1 further deposed that she was favorite of her father and there was no reason for her father to execute the will in favour of the defendants, by excluding her.

During the course of her cross examination, PW1 admitted that to perform her marriage during the year 2002, her father had

borrowed hand loan from their family friends. PW.1 denied that for repayment of the said loan, their ancestral properties were sold. PW.1 admitted that sale of ancestral property by her father and these defendants were not disputed and challenged by her at any point of time. PW.1 admitted that her father was working a teacher in government primary school and retired during April 2003. PW.1 also admitted that, as her father has served as a teacher for more than 35 years, he received substantial amount as retirement benefits. PW.1 denied that her father Ranganna was hale and healthy and had absolutely no ailments. PW1 admitted that her father was never hospitalized and his mental condition was stable till his death. PW1 denied the signature on Ex.D1 Will of her father Ranganna. But, she admitted that her father used to sign in English. PW1 admitted that her father and these defendants have performed her marriage. PW.1 admitted that after her marriage she stayed in her husband's house at Hungund and these defendants used to look after their father during her last days. PW1 denied the suggestion that her father late Ranganna has executed Ex.D1 Will and bequeathed suit property in favour of defendant No.1 and 2.

The plaintiff produced the property extract of the suit property as per Ex.P.1, which show that suit property was initially standing in the name of Late Ranganna and names of defendant No.1 and 2 were entered as the owners of suit property on the basis of the registered Will dated 27.09.2011.

EVIDENCE ON BEHALF OF THE DEFENDANTS:

The defendant No.2, who was examined as DW.1, in his evidence admitted the relation between them and denied other

plaint averments. DW.1 further deposed that they have performed the marriage of the plaintiff and for meeting the marriage expenses, they have borrowed the hand loan from their family friends. DW.1 further deposed that to repay the said loan they were constrained to sell their ancestral property at Mudhol Taluk. DW.1 further deposed that his father has served as Primary school teacher for about 35 years and retired during the year 2003 and from his retirement benefits, he purchased the suit property just after his retirement. DW.1 further deposed that he and defendant No.1 were looking after their father during his last days, where as plaintiff was staying at Hungund with her husband. DW.1 further deposed that their father, Ranganna, when he was in a sound disposing state of mind, had executed the registered Will dated 27.09.2011 and bequeathed the suit property in their favour. DW.1 identified the signatures of his father and attesting witnesses found on the Ex.D1 Will, by saying that he was personally present at the time of execution of the said Will. DW.1 further deposed that on the basis of the said Will, they became the absolute owners of the suit property and plaintiff has no right to claim share over the suit property.

During the course of his cross examination, DW1 admitted that their family owned ancestral property at Mudhol and it was sold during the year 2002. DW.1 also admitted that suit property was purchased about six months after the sale of their ancestral property. DW.1 said that he was not aware about the amount of loan borrowed for plaintiffs marriage and sale consideration amount for which their ancestral property was sold. DW.1 also admitted that their father used to receive the agricultural income from the ancestral properties at Mudhol. DW.1 also admitted that their

father Ranganna had no ill will against the plaintiff and he was treating all his children equally and cordially. DW1 denied the suggestion that late Ranganna's health condition was not good about one and half years prior to his death. DW1 denied the suggestion that they have forged the signature of their father and created Ex.D1 Will in order to grab the suit property and deprive the plaintiff of her legitimate share in the suit property.

The defendants examined one Aruna, son of attesting witness to the Will, late Manjappa, as DW.2 and he deposed that, his father is no more and he is familiar with his father's signature, but he did not find the signature of his father on Ex.D1 Will. The defendants cross-examined DW.2 by treating him as a hostile witness and even during the cross-examination, DW2 denied the suggestion that his father had signed on Ex.D1 Will as an attesting witness, by saying that his father used to sign in Kannada. Counsel for the plaintiff submitted no cross examination to DW2.

The defendants examined one Krishnamurthy, a document writer at Bagalkot as DW.3 and he deposed that he has been working as a document writer in Bagalkot since last 28 years and Ex.D.1 Will was prepared by him as per the instructions of Ranganna. DW.3 further deposed than on 27.09.2011 Ranganna come to his office along with two witnesses by name Manjappa and Venkappa and in their presence Ex.D.1 Will was read over to Ranganna and he put his signatures for the same. DW.3 identified

the signatures of Late Ranganna and attesting witnesses and also his signature as a scribe on Ex.D.1 Will.

DW.3 during the course of his cross-examination, deposed that he was not present when Ex.D.1 Will was taken to the office of Sub-Registrar for Registration. DW.1 admitted that defendant No.1 and 2 were present when the Will was prepared. DW.3 said that he can not say as to who has brought attesting witnesses to his office. DW.3 admitted that Sri Venkappa, who has signed Ex.D1 as an attesting witness, was running a petty shop near his office and he has put signature for many documents prepared by him as a witness. DW.3 denied the suggestion that Ranganna was not in a sound state of mind to give instruction to him to prepare the Will. DW.3 denied the suggestion that said Will was prepared by him as per the instruction of defendant No.1 and 2.

The defendants produced registered Will dated 27.09.2011 as per Ex.D1, where in it is recited that suit property is the self acquired property of Ranganna and he was looked after by the defendants during his old age and they had performed the marriage of the plaintiff by borrowing the loan and gave her money and ornaments at the time of her marriage and she was staying comfortably in her husband's house and out of his free will, love and affection, he had bequeathed the suit property in favour of the defendants. Ex.D2 is the death certificates of Late Ranganna, which shows that he died on 31.10.2011.

HIGHLIGHTS OF ARGUMENT FOR THE PLAINTIFF:

- There is no dispute about the relationship between the plaintiff and the defendants and their family having ancestral property at Mudhol.
- There is also no dispute about sale of ancestral property and purchase of suit property within few months. The defendant No.2/DW1 admitted that their father Ranganna was getting agricultural income from the ancestral property at Mudhol till it was sold.
- The plaintiff discharged the initial burden of proving the suit property as the property purchased from the sale proceeds of the ancestral property and onus shift upon the defendants to prove that the suit property was purchased from the self earning of their father. But, the defendants failed to let is any evidence to prove the same.
- The burden of proving the issue No.3 is on the defendants. Section _____ of the Indian Succession Act, 1925 describes as to how a Will has to be executed and Section _____ of the Indian Evidence Act, 1872 describes as to how execution of the will has to be proved. As per the above provisions Will shall be attested by at least two witnesses, each of whom has seen the testator signing the Will and the said Will has to be proved by examining at least one attesting witnesses. Both the attesting witnesses to Ex.D1 Will were not examined by the defendants.
- Son of one of attesting witness, though examined as DW.2, has not identified his fathers signatures. Therefore, evidence of

DW.2 will not help the defendants to prove Ex.D.1 Will, as required under Section _____ of the Indian Evidence Act, 1872.

- Evidence of DW.3 can not be considered to prove the Ex.D.1 Will because he is only a scribe. When Section _____ of the Indian Evidence Act, 1872 mandates for examining at least one of the attesting witnesses to prove the Will, evidence of scribe can not be considered to prove the execution of the Will.
- Ex.D.1 Will is surrounded by suspicious circumstances and it is unnatural Will, as one of the natural heirs of Late Ranganna i.e. plaintiff has been excluded from inheriting the suit property, without any valid reason and also due to the presence of the beneficiaries of the Will at the time of its execution.

HIGHLIGHTS OF ARGUMENT FOR THE DEFENDANTS:

- The plaintiff/PW.1 admitted that to perform her marriage, her father borrowed the loan from his family friends.
- Sale of ancestral property by the defendants and their father Ranganna was few months after the plaintiffs marriage to repay the said loan.
- The plaintiff/PW.1 admitted that her father retired during April 2003 and received substantial retirement benefits. Purchase of suit property was few months after the retirement of Ranganna and from his retirement benefits.
- If the suit property is purchased from the sale of ancestral property, it would have been purchased jointly in the name of these defendants and their father Ranganna.

- When Ranganna having self acquired income is admitted and property was purchased in his name alone, the purchase of suit property by him presumed to be from his own earnings and burden is upon the plaintiff to prove that the suit property was purchased from the sale proceeds of ancestral property. The plaintiff has not let in any evidence to prove the same.
- As both the attesting witnesses are not available to prove Ex.D.1 Will, defendants are invoking Section _____ of the Indian Evidence Act, 1872.
- Even though DW.2 has not supported the defendants and failed to identify the signature of his father on Ex.D.1, there is evidence of DW.3 to prove the Ex.D.1 Will. DW.3 has deposed about the execution of D1 Will by Ranganna and also identified his signatures and signatures of both the attesting witnesses. Therefore, evidence of DW.3 can be considered as evidence of a witness as required under Section _____ of the Indian Evidence Act, 1872.
- The recitals of the Ex.D1 Will offer valid explanation for excluding the plaintiff and bequeathing the suit property only in favour of the defendants. Therefore, it is not an unnatural will. There are no suspicious circumstances surrounding the execution of Ex.D.1 Will in favour of these defendants.

ಈ ಕೆಳಗಿನ ವಾದಪತ್ರ, ಪ್ರತಿವಾದ ಪತ್ರ, ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳ ಆಧಾರದ ಮೇಲೆ ಸಮಂಜಸ ಹಾಗೂ ತರ್ಕಬದ್ಧ ಸಮರ್ಥನಾಂಶಗಳನ್ನು ನೀಡಿ ತೀರ್ಪನ್ನು ಬರೆಯಿರಿ:

(ಖಾಲಿ ಬಿಟ್ಟಿರುವ ಕಾನೂನಿನ ನಿಭಂದನೆಗಳನ್ನು ತೀರ್ಪಿನಲ್ಲಿ ನಮೂದಿಸತಕ್ಕದ್ದು)

ಅಂಕಗಳು: 75

ವಾದಪತ್ರ

ದಾವಾ ಷೆಡ್ಯೂಲಿನಲ್ಲಿ ವಿವರಿಸಿರುವ ದಾವಾ ಆಸ್ತಿ ಬಾಗಲಕೋಟೆ, ನವನಗರದ ಸರ್ವೆ ನಂ.24/5ರಲ್ಲಿನ 8 ಗುಂಟೆ ಜಮೀನು ಮತ್ತು ಅದರಲ್ಲಿರುವ 2 ಅಂತಸ್ತಿನ ವಾಸದ ಮನೆಯಾಗಿದೆ. ವಾದಿಯು ದಿವಂಗತ ರಂಗಣ್ಣ ಇವರ ವಿವಾಹಿತ ಮಗಳು ಮತ್ತು 1 ಮತ್ತು 2ನೇ ಪ್ರತಿವಾದಿಯರ ತಂಗಿಯಾಗಿರುತ್ತಾಳೆ. ವಾದಿಯ ಮದುವೆಯು ದಿನಾಂಕ 17.06.2002ರಂದು ನೆರವೇರಿತ್ತು. ಅವರ ಕುಟುಂಬಕ್ಕೆ ಮುದೋಳ ತಾಲೂಕಿನಲ್ಲಿ 3 ಎಕರೆ ವಿಸ್ತೀರ್ಣದ ಪಿತ್ರಾರ್ಜಿತ ಆಸ್ತಿ ಇದ್ದು ಅದನ್ನು ವಾದಿಯ ತಂದೆ ರಂಗಣ್ಣ ಮತ್ತು ಈ ಪ್ರತಿವಾದಿಯರು ಜಂಟಿಯಾಗಿ ದಿನಾಂಕ 21.12.2002ರ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದರು. ಆ ಮಾರಾಟದ ಹಣದಿಂದ ಅವರ ತಂದೆ ರಂಗಣ್ಣ ದಿನಾಂಕ 25.07.2003ರ ಖರೀದಿ ಪತ್ರದ ಮೂಲಕ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದರು ಮತ್ತು ದಾವಾ ಆಸ್ತಿ ಅವರ ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ. ವಾದಿ ಮತ್ತು ಪ್ರತಿವಾದಿಯರ ತಂದೆ ರಂಗಣ್ಣ ದಿನಾಂಕ 31.10.2011ರಂದು ಮೃತಪಟ್ಟಿದ್ದರು. ಪ್ರತಿವಾದಿಯರು ಅವರ ತಂದೆ ತೀರಿಕೊಂಡ ಬಳಿಕ ದಿನಾಂಕ 27.09.2011ರ ಉಯಿಲು ನಾಮೆಯ ಮೂಲಕ ತಮ್ಮ ಹೆಸರನ್ನು ದಾವಾ ಆಸ್ತಿಯ ಕಂದಾಯ ದಾಖಲೆಗಳಲ್ಲಿ ನೊಂದಾಯಿಸಿಕೊಂಡಿದ್ದರು. ದಿನಾಂಕ 27.09.2011ರ ಪ್ರಶ್ನಿತ ಉಯಿಲು ನಾಮೆ ಪ್ರತಿವಾದಿಯರು ಅವರ ತಂದೆ ತೀರಿಕೊಳ್ಳುವ ಕೆಲವೇ ದಿನಗಳ ಮೊದಲು ದಾವಾ ಆಸ್ತಿಯನ್ನು ಕಬಳಿಸಲು ತಯಾರಿಸಿದ ಮತ್ತು ಸೃಷ್ಟಿಸಿದ ದಾಖಲೆಯಾಗಿದೆ. ವಾದಿಯು ದಾವಾ ಆಸ್ತಿಯ ಮೇಲೆ ತನಗೆ ಇರುವ ಹಿಸ್ಸೆಯನ್ನು ವಿಭಜಿಸಿ ಅದರ ಪ್ರತ್ಯೇಕ ಸ್ವಾಧೀನವನ್ನು ಕೊಡಬೇಕು ಎಂದು ಪ್ರತಿವಾದಿಯರಲ್ಲಿ ವಿನಂತಿ ಮಾಡಿದ್ದಳು. ಪ್ರತಿವಾದಿಯರು ವಾದಿಯ ಹಿಸ್ಸೆಯನ್ನು ಕೊಡಲು ನಿರಾಕರಿಸಿದ್ದರಿಂದ ಆಕೆ ಈ ದಾವಾ ಮಾಡಬೇಕಾಯಿತು.

ಈ ಎಲ್ಲಾ ಕಾರಣಗಳಿಂದ ವಾದಿಯು ದಾವಾ ಆಸ್ತಿಯ ಮೇಲೆ ಆಕೆಗೆ ಇರುವ 1/3ನೇ ಅಂಶದ ಹಿಸ್ಸೆಯನ್ನು ವಿಭಾಗಿಸಿ ಅದರ ಪ್ರತ್ಯೇಕ ಸ್ವಾಧೀನಕ್ಕಾಗಿ ಡಿಕ್ರಿ ಮಾಡಬೇಕು ಎಂದು ಕೇಳಿರುತ್ತಾಳೆ.

ಪ್ರತಿವಾದ ಪತ್ರ

1 ಮತ್ತು 2ನೇ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ಅವರ ನಡುವಿನ ಸಂಬಂಧವನ್ನು ಒಪ್ಪಿಕೊಂಡು ವಾದಪತ್ರದ ಇತರ ವಿಷಯಗಳಾದ ದಾವಾ ಆಸ್ತಿ ಅವರ ಒಟ್ಟು ಕುಟುಂಬದ ಆಸ್ತಿ ಮತ್ತು

ಅದರಲ್ಲಿ ವಾದಿಗೆ ಹಿಸ್ಸೆ ಇದೆ ಎನ್ನುವುದನ್ನು ನಿರಾಕರಿಸಿದ್ದಾರೆ. ಪ್ರತಿವಾದಿಯರ ಪ್ರಕಾರ 2002ನೇ ಸಾಲಿನಲ್ಲಿ ಈ ವಾದಿಯ ಮದುವೆಯನ್ನು ನೆರವೇರಿಸಲು ಅವರ ತಂದೆ ಅವರ ಸ್ನೇಹಿತರಿಂದ ಕೈ ಸಾಲವನ್ನು ಪಡೆದುಕೊಂಡಿದ್ದು ಅದನ್ನು ಮರುಪಾವತಿ ಮಾಡಲು ಅವರು ಮುದೋಳ ತಾಲೂಕಿನಲ್ಲಿರುವ ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿದ್ದರು. ಪ್ರತಿವಾದಿಯರ ತಂದೆ ರಂಗಣ್ಣ ಪ್ರಾಥಮಿಕ ಶಾಲೆ ಶಿಕ್ಷಕರಾಗಿ ಕೆಲಸ ಮಾಡುತಿದ್ದು ಏಪ್ರಿಲ್ 2003ರಲ್ಲಿ ನಿವೃತ್ತಿಯಾಗಿದ್ದರು. ತನ್ನ ನಿವೃತ್ತಿಯ ಕಾಲದಲ್ಲಿ ಬಂದ ಹಣದಿಂದ ಮತ್ತು ತನ್ನ ಸ್ವಂತ ಆಧಾಯದಿಂದ ಪ್ರತಿವಾದಿಯರ ತಂದೆ ದಿನಾಂಕ 25.07.2003ರ ಖರೀದಿ ಪತ್ರದ ಮೂಲಕ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದರು. ದಾವಾ ಆಸ್ತಿಯು ವಾದಿ ಮತ್ತು ಪ್ರತಿವಾದಿಯರ ತಂದೆ ರಂಗಣ್ಣನ ಸ್ವಯಾರ್ಜಿತ ಆಸ್ತಿಯಾಗಿತ್ತು. ಪ್ರತಿವಾದಿಯರು ಅವರ ತಂದೆಯನ್ನು ನೋಡಿಕೊಂಡಿದ್ದು ಆ ಪ್ರೀತಿ ವಿಶ್ವಾಸದ ಕಾರಣ ಅವರು ದಿನಾಂಕ 27.09.2011ರ ನೊಂದಾಯಿತ ಉಯಿಲು ನಾಮೆಯ ಮೂಲಕ ದಾವಾ ಆಸ್ತಿಯನ್ನು ಪ್ರತಿವಾದಿಯರಿಗೆ ಉಯಿಲು ಮಾಡಿದ್ದರು. ತಮ್ಮ ತಂದೆಯ ಮರಣಾನಂತರ ಪ್ರತಿವಾದಿಯರು ದಿನಾಂಕ 27.09.2011ರ ಉಯಿಲು ನಾಮೆಯ ಮೂಲಕ ದಾವಾ ಸ್ವತ್ತಿನ ಕಂದಾಯ ದಾಖಲೆಗಳನ್ನು ತಮ್ಮ ಹೆಸರಲ್ಲಿ ಬದಲಾಯಿಸಿಕೊಂಡು ಅವರು ದಾವಾ ಆಸ್ತಿಯನ್ನು ಅದರ ಸಂಪೂರ್ಣ ಮಾಲೀಕರಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ. ವಾದಿಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು, ಮಾಲೀಕತ್ವ, ಹಿತಾಸಕ್ತಿ ಮತ್ತು ಹಿಸ್ಸೆ ಇರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯರು ದಾವಾವನ್ನು ಖರ್ಚು ಸಹಿತ ವಜಾ ಮಾಡಲು ಕೋರಿಕೊಂಡಿರುತ್ತಾರೆ.

<u>ವಿವಾದಾಂಶಗಳು</u>

1. **ದಾವಾ ಆಸ್ತಿ ತಮ್ಮ ಒಟ್ಟು ಕುಟುಂಬದ ಆಸ್ತಿ ಮತ್ತು ಅದರಲ್ಲಿ ತನಗೆ ಹಿಸ್ಸೆ ಕೇಳುವ ಹಕ್ಕು ಇದೆ ಎನ್ನುವುದನ್ನು ವಾದಿಯು ಸಾಬೀತು ಪಡಿಸುವರೇ?**
2. **ದಾವಾ ಆಸ್ತಿಯು ತಮ್ಮ ತಂದೆ ರಂಗಣ್ಣರವರ ಸ್ವಯಾರ್ಜಿತ ಮತ್ತು ಸಂಪೂರ್ಣ ಹಕ್ಕಿನ ಆಸ್ತಿ ಎಂದು ಪ್ರತಿವಾದಿಯರು ಸಾಬೀತು ಪಡಿಸುವರೇ?**
3. **ದಾವಾ ಆಸ್ತಿಯನ್ನು ತಮ್ಮ ತಂದೆ ರಂಗಣ್ಣ ದಿನಾಂಕ 27.09.2011ರಂದು ಬರೆದುಕೊಟ್ಟ ನೊಂದಾಯಿತ ಉಯಿಲು ನಾಮೆ ಮೂಲಕ ತಮ್ಮ ಪರವಾಗಿ ಉಯಿಲು ಮಾಡಿದ್ದರು ಮತ್ತು ಆ ಪ್ರಕಾರ ತಾವು ದಾವಾ ಆಸ್ತಿಯ ಸಂಪೂರ್ಣ ಮಾಲೀಕರಾಗಿರುತ್ತೇವೆ ಎಂದು ಪ್ರತಿವಾದಿಯರು ಸಾಬೀತು ಪಡಿಸುವರೇ?**
4. **ವಾದಿಯು ದಾವಾ ಆಸ್ತಿಯ ಹಿಸ್ಸೆ ಮತ್ತು ಪ್ರತ್ಯೇಕ ಸ್ವಾಧೀನದ ಡಿಕ್ರಿ ಪಡೆಯಲು ಅರ್ಹಳಿರುತಾಳೆಯೇ?**
5. **ಯಾವ ಆದೇಶ ಯಾ ಡಿಕ್ರಿ?**

ವಾದಿಯ ಪರವಾಗಿ ಸಾಕ್ಷ್ಯ

ವಾದಿಯು ವಾಸಾ.1 ಎಂದು ಸಾಕ್ಷಿ ನುಡಿಯುತ್ತಾ ಪಕ್ಷಗಾರರ ನಡುವಿನ ಸಂಬಂಧಗಳ ಬಗ್ಗೆ ಮತ್ತು ಅವರ ತಂದೆ ಮುದೋಳದಲ್ಲಿರುವ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿ ದಾವಾ ಆಸ್ತಿಯನ್ನು ಖರೀದಿ ಮಾಡಿರುವುದರಿಂದ ಅದು ಅವರ ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ. ವಾಸಾ.1 ಮುಂದುವರಿದು ಆಕೆ ದಿವಂಗತ ರಂಗಣ್ಣನವರ ಮಗಳಾಗಿ ಆಕೆಗೆ ದಾವಾ ಸ್ವತ್ತಿನ ಮೇಲೆ ಕಾನೂನುಬದ್ದ ಹಿಸ್ಸೆ ಇದ್ದು ಸಾಕಷ್ಟು ಬಾರಿ ವಿನಂತಿ ಮಾಡಿ ಕೋರಿದ್ದರು ಕೂಡ ಪ್ರತಿವಾದಿಯರು ಆಕೆಯ ಹಿಸ್ಸೆಯನ್ನು ಕೊಡಲು ನಿರಾಕರಿಸಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ವಾಸಾ.1 ಮುಂದುವರಿದು ಅವರ ತಂದೆ ರಂಗಣ್ಣ ಬರೆದುಕೊಟ್ಟಿರುತ್ತಾರೆ ಎಂದು ಪ್ರತಿವಾದಿಯರು ಸಾಧಿಸುವ ಉಯಿಲು ನಾಮೆ ದಾವಾ ಆಸ್ತಿಯನ್ನು ಕಬಳಿಸಲು ಪ್ರತಿವಾದಿಯರು ತಯಾರಿಸಿ ಸೃಷ್ಟಿಸಿದ್ದು ಎಂದು ಸಾಕ್ಷಿ ನುಡಿಯುತ್ತಾರೆ. ವಾಸಾ.1 ಮುಂದುವರಿದು ಆಕೆ, ಆಕೆಯ ತಂದೆಯ ಅಚ್ಚುಮೆಚ್ಚಿನವಳಾಗಿದ್ದು ಆಕೆಯನ್ನು ಬಿಟ್ಟು ಕೇವಲ ಪ್ರತಿವಾದಿಯರ ಪರವಾಗಿ ಉಯಿಲು ನಾಮೆಯನ್ನು ಬರೆದುಕೊಡಲು ಆಕೆಯ ತಂದೆಗೆ ಯಾವುದೇ ಕಾರಣಗಳು ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ವಾಸಾ.1 ತನ್ನ ಪಾಟೀ ಸವಾಲಿನಲ್ಲಿ 2002ನೇ ಸಾಲಿನಲ್ಲಿ ತನ್ನ ಮದುವೆಯನ್ನು ಮಾಡಲು ಆಕೆಯ ತಂದೆ ತನ್ನ ಕುಟುಂಬದ ಗೆಳೆಯರಿಂದ ಕೈ ಸಾಲ ಪಡೆದಿದ್ದರು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಆ ಸಾಲವನ್ನು ಮರುಪಾವತಿ ಮಾಡಲು ಅವರ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಲಾಗಿತ್ತು ಎನ್ನುವುದನ್ನು ವಾಸಾ.1 ನಿರಾಕರಿಸುತ್ತಾರೆ. ವಾಸಾ.1 ತಾನು ತನ್ನ ತಂದೆ ಮತ್ತು ಪ್ರತಿವಾದಿಯರು ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿರುವುದನ್ನು ಯಾವ ಕಾಲಕ್ಕು ಕೂಡ ತಕರಾರು ಮಾಡಿಲ್ಲ ಮತ್ತು ಅದನ್ನು ಪ್ರಶ್ನಿಸಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ವಾಸಾ.1 ತನ್ನ ತಂದೆ ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದರು ಮತ್ತು ಏಪ್ರಿಲ್ 2003ರಲ್ಲಿ ನಿವೃತ್ತಿಯಾಗಿದ್ದರು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ತನ್ನ ತಂದೆ ಸುಮಾರು 35 ವರ್ಷಗಳ ಕಾಲ ಶಿಕ್ಷಕನಾಗಿ ಕೆಲಸ ಮಾಡಿದ್ದರಿಂದ ಅವರಿಗೆ ನಿವೃತ್ತಿ ಕಾಲದಲ್ಲಿ ಸಾಕಷ್ಟು ಹಣ ಸಿಕ್ಕಿತ್ತು ಎನ್ನುವುದನ್ನು ಕೂಡ ವಾಸಾ.1 ಒಪ್ಪಿಕೊಳ್ಳುತ್ತಾರೆ. ವಾಸಾ.1 ತನ್ನ ತಂದೆ ಆರೋಗ್ಯವಾಗಿ ಇದ್ದರು ಮತ್ತು ಅವರಿಗೆ ಯಾವುದೇ ಕಾಯಿಲೆಗಳು ಇರಲಿಲ್ಲ ಎನ್ನುವುದನ್ನು ನಿರಾಕರಿಸುತ್ತಾರೆ. ವಾಸಾ.1 ತನ್ನ ತಂದೆ ಯಾವತ್ತೂ ಆಸ್ಪತ್ರೆಗೆ ದಾಖಲಾಗಿರಲಿಲ್ಲ ಮತ್ತು ಮರಣ ಹೊಂದುವವರೆಗೆ ಅವರು ಮಾನಸಿಕವಾಗಿ ಸದೃಢವಾಗಿದ್ದರು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ವಾಸಾ.1 ನಿಶಾನೆ ಡಿ.1 ಉಯಿಲು ನಾಮೆಯಲ್ಲಿ ಇರುವ ಸಹಿ ತನ್ನ ತಂದೆ ರಂಗಣ್ಣನದ್ದು ಎನ್ನುವುದನ್ನು ನಿರಾಕರಿಸುತ್ತಾರೆ. ಆದರೆ ತನ್ನ ತಂದೆ ಇಂಗ್ಲೀಷಿನಲ್ಲಿ ಸಹಿ ಮಾಡುತ್ತಿದ್ದರು ಎನ್ನುವುದನ್ನು ಆಕೆ

ಒಪ್ಪಿಕೊಳ್ಳುತ್ತಾರೆ. ವಾಸಾ.1 ತನ್ನ ಮದುವೆಯನ್ನು ತನ್ನ ತಂದೆ ಮತ್ತು ಪ್ರತಿವಾದಿಯರು ನೆರವೇರಿಸಿಕೊಟ್ಟಿದ್ದರು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ವಾಸಾ.1 ತಾನು ತನ್ನ ಮದುವೆಯ ನಂತರ ಹುನಗುಂದದಲ್ಲಿರುವ ತನ್ನ ಗಂಡನ ಮನೆಯಲ್ಲಿ ವಾಸ ಮಾಡಿಕೊಂಡಿದ್ದು ಪ್ರತಿವಾದಿಯರೆ ತಮ್ಮ ತಂದೆಯನ್ನು ಅವರ ಕೊನೆಯ ದಿನಗಳಲ್ಲಿ ನೋಡಿಕೊಂಡು ಬಂದಿದ್ದರು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ವಾಸಾ.1 ಆಕೆಯ ತಂದೆ ನಿಶಾನೆ ಡಿ.1 ಉಯಿಲು ನಾಮೆಯನ್ನು ಬರೆದುಕೊಟ್ಟು ದಾವಾ ಆಸ್ತಿಯನ್ನು 1 ಮತ್ತು 2ನೇ ಪ್ರತಿವಾದಿಯರ ಪರವಾಗಿ ಉಯಿಲು ಮಾಡಿದ್ದರು ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

ವಾದಿಯು ದಾವಾ ಅಸ್ತಿಯ ಆಸ್ತಿ ನಕಲನ್ನು ನಿಶಾನೆ ಪಿ.1 ರಂತೆ ಹಾಜರು ಪಡಿಸಿದ್ದು ಅದು ದಾವಾ ಆಸ್ತಿಯು ಮೂಲತಃ ದಿವಂಗತ ರಂಗಣ್ಣನ ಹೆಸರಲ್ಲಿ ಇದ್ದು ದಿನಾಂಕ 27.09.2011ರ ಉಯಿಲು ನಾಮೆಯ ಮೂಲಕ 1 ಮತ್ತು 2ನೇ ಪ್ರತಿವಾದಿಯರ ಹೆಸರು ದಾವಾ ಆಸ್ತಿಯ ಮಾಲೀಕರು ಎಂದು ದಾಖಲಾಗಿದೆ ಎಂದು ತೋರಿಸುತ್ತದೆ.

<u>ಪ್ರತಿವಾದಿಯರ ಪರವಾಗಿ ಸಾಕ್ಷಿ</u>

2ನೇ ಪ್ರತಿವಾದಿಯು ಪ್ರಸಾ.1 ಎಂದು ಸಾಕ್ಷಿ ನುಡಿಯುತ್ತಾ ತನ್ನ ಸಾಕ್ಷಿ ಹೇಳಿಕೆಯಲ್ಲಿ ಅವರ ನಡುವಿನ ಸಂಬಂಧವನ್ನು ಒಪ್ಪಿಕೊಂಡಿದ್ದು ವಾದಪತ್ರದ ಇತರ ಅಂಶಗಳನ್ನು ನಿರಾಕರಿಸಿದ್ದಾರೆ. ಪ್ರಸಾ.1 ಮುಂದುವರಿದು ಅವರು ವಾದಿಯ ಮದುವೆಯನ್ನು ನೆರವೇರಿಸಿಕೊಟ್ಟಿದ್ದು ಆ ಮದುವೆ ಖರ್ಚನ್ನು ವಹಿಸಲು ಅವರ ಕುಟುಂಬದ ಸ್ನೇಹಿತರಿಂದ ಕೈ ಸಾಲವನ್ನು ಪಡೆದುಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಪ್ರಸಾ.1 ಮುಂದುವರಿದು ಆ ಸಾಲದ ಮರುಪಾವತಿಗಾಗಿ ಅವರು ಮುದೋಳ ತಾಲೂಕಿನಲ್ಲಿರುವ ತಮ್ಮ ಪಿತ್ರಾರ್ಜಿತ ಜಮೀನುಗಳನ್ನು ಮಾರಾಟ ಮಾಡಬೇಕಾಗಿ ಬಂದಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಸಾ.1 ಮುಂದುವರಿದು ತನ್ನ ತಂದೆ ಸುಮಾರು 35 ವರ್ಷಗಳ ಕಾಲ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕೆಲಸ ಮಾಡಿ 2003ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ್ದು ಅವರ ನಿವೃತ್ತಿಯ ಕಾಲಕ್ಕೆ ಬಂದ ಹಣದಿಂದ ಅವರು ದಾವಾ ಸ್ವತ್ತನ್ನು ನಿವೃತ್ತಿಯ ಸ್ವಲ್ಪ ಸಮಯದ ನಂತರ ಖರೀದಿ ಮಾಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಸಾ.1 ಮುಂದುವರಿದು ತಾನು ಮತ್ತು 1ನೇ ಪ್ರತಿವಾದಿಯು ತಮ್ಮ ತಂದೆಯನ್ನು ಅವರ ಕೊನೆಯ ದಿನಗಳಲ್ಲಿ ನೋಡಿಕೊಂಡಿದ್ದು ವಾದಿಯು ತನ್ನ ಗಂಡನೊಂದಿಗೆ ಹುನಗುಂದದಲ್ಲಿ ವಾಸ ಮಾಡಿಕೊಂಡಿದ್ದಳು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಸಾ.1 ಮುಂದುವರಿದು ಅವರ ತಂದೆ ರಂಗಣ್ಣ ತಾನು ಉತ್ತಮವಾದ ಮಾನಸಿಕ ಸ್ಥಿತಿಯಲ್ಲಿ ಇದ್ದಾಗ ದಿನಾಂಕ 27.09.2011ರ ನೊಂದಾಯಿತ ಉಯಿಲು ನಾಮೆಯನ್ನು ಬರೆದು ದಾವಾ ಆಸ್ತಿಯನ್ನು ತಮ್ಮ ಪರವಾಗಿ ಉಯಿಲು ಮಾಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಸಾ.1 ನಿಶಾನೆ ಡಿ.1 ಉಯಿಲು ನಾಮೆ ಮಾಡುವ ಕಾಲಕ್ಕೆ ತಾನು ಸ್ವತಃ ಹಾಜರಿದ್ದೆ

ಎಂದು ನುಡಿಯುತ್ತಾ ಆ ಉಯಿಲು ನಾಮೆಯಲ್ಲಿರುವ ತನ್ನ ತಂದೆ ಮತ್ತು ದೃಢೀಕರಿಸಿದ ಸಾಕ್ಷಿಗಳ ಸಹಿಗಳನ್ನು ಗುರುತಿಸುತ್ತಾರೆ. ಪ್ರಸಾ.1 ಮುಂದುವರಿದು ಆ ಉಯಿಲು ನಾಮೆಯ ಆಧಾರದ ಮೇಲೆ ತಾವು ದಾವಾ ಆಸ್ತಿಯ ಸಂಪೂರ್ಣ ಮಾಲೀಕರಾಗಿದ್ದು ವಾದಿಗೆ ದಾವಾ ಆಸ್ತಿಯ ಮೇಲೆ ಹಿಸ್ಸೆ ಕೇಳುವ ಹಕ್ಕು ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ತಮ್ಮ ಪಾಟೀ ಸವಾಲಿನಲ್ಲಿ ಪ್ರಸಾ.1 ಅವರ ಕುಟುಂಬಕ್ಕೆ ಮುದೋಳದಲ್ಲಿ ಪಿತ್ರಾರ್ಜಿತ ಆಸ್ತಿ ಇದ್ದಿರುವುದನ್ನು ಮತ್ತು ಅದನ್ನು 2002ನೇ ಸಾಲಿನಲ್ಲಿ ಮಾರಾಟ ಮಾಡಿರುವುದನ್ನು ಒಪ್ಪಿಕೊಳ್ಳುತ್ತಾರೆ. ಪ್ರಸಾ.1 ಅವರ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿದ 6 ತಿಂಗಳ ನಂತರ ದಾವಾ ಆಸ್ತಿಯನ್ನು ಖರೀದಿ ಮಾಡಲಾಗಿತ್ತು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಪ್ರಸಾ.1 ವಾದಿಯ ಮದುವೆಗೆ ಎಷ್ಟು ಹಣವನ್ನು ಸಾಲವಾಗಿ ಪಡೆಯಲಾಗಿತ್ತು ಮತ್ತು ಪಿತ್ರಾರ್ಜಿತ ಆಸ್ತಿಯನ್ನು ಎಷ್ಟು ಕ್ರಯದ ಪ್ರತಿಫಲಕ್ಕೆ ಮಾರಾಟ ಮಾಡಲಾಗಿತ್ತು ಎಂದು ತನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಸಾ.1 ಮುದೋಳದಲ್ಲಿರುವ ಪಿತ್ರಾರ್ಜಿತ ಆಸ್ತಿಗಳಿಂದ ಅವರ ತಂದೆ ಕೃಷಿ ಆದಾಯವನ್ನು ಕೂಡ ಗಳಿಸುತ್ತಿದ್ದರು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಪ್ರಸಾ.1 ಅವರ ತಂದೆ ರಂಗಣ್ಣನಿಗೆ ಈ ವಾದಿಯ ಮೇಲೆ ಯಾವುದೇ ದ್ವೇಷ ಇರಲಿಲ್ಲ ಮತ್ತು ಅವರು ಅವರ ಎಲ್ಲಾ ಮಕ್ಕಳನ್ನು ಸಮಾನವಾಗಿ ಮತ್ತು ಸೌಹಾರ್ದಯುತವಾಗಿ ನೋಡಿಕೊಳ್ಳುತ್ತಿದ್ದರು ಎನ್ನುವುದನ್ನು ಕೂಡ ಒಪ್ಪಿಕೊಳ್ಳುತ್ತಾರೆ. ಪ್ರಸಾ.1 ಅವರ ತಂದೆ ರಂಗಣ್ಣನವರ ಆರೋಗ್ಯ ಸ್ಥಿತಿ ಅವರು ತೀರಿಕೊಳ್ಳುವ ಸುಮಾರು ಒಂದೂವರೆ ವರ್ಷಗಳ ಹಿಂದಿನಿಂದ ಚೆನ್ನಾಗಿ ಇರಲಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸುತ್ತಾರೆ. ಪ್ರಸಾ.1 ತಾವು ತಮ್ಮ ತಂದೆಯ ಸಹಿಗಳನ್ನು ನಕಲಿ ಮಾಡಿ ದಾವಾ ಆಸ್ತಿಯನ್ನು ಕಬಳಿಸಲು ಮತ್ತು ದಾವಾ ಆಸ್ತಿಯ ಮೇಲೆ ವಾದಿಗೆ ಇರುವ ಕಾನೂನುಬದ್ಧ ಹಿಸ್ಸೆಯನ್ನು ಕಸಿದುಕೊಳ್ಳಲು ನಿಶಾನೆ ಡಿ.1 ಉಯಿಲು ನಾಮೆಯನ್ನು ಸೃಷ್ಟಿಸಿದ್ದೇವೆ ಎನ್ನುವ ಸೂಚನೆಯನ್ನು ನಿರಾಕರಿಸುತ್ತಾರೆ.

ಪ್ರತಿವಾದಿಯರು ಉಯಿಲು ನಾಮೆಯನ್ನು ದೃಢೀಕರಿಸಿದ ಸಾಕ್ಷಿ ದಿವಂಗತ ಮಂಜಪ್ಪನವರ ಮಗ ಅರುಣ ಅವರನ್ನು ಪ್ರಸಾ.2 ಎಂದು ಸಾಕ್ಷಿ ವಿಚಾರಣೆ ಮಾಡಿ ಅವರು ತಮ್ಮ ಸಾಕ್ಷಿ ಹೇಳಿಕೆಯಲ್ಲಿ ತನ್ನ ತಂದೆ ಮೃತಪಟ್ಟಿದ್ದು ತನಗೆ ತನ್ನ ತಂದೆಯ ಸಹಿಯ ಬಗ್ಗೆ ಚೆನ್ನಾಗಿ ಮಾಹಿತಿ ಇದ್ದು ನಿಶಾನೆ ಡಿ.1 ಉಯಿಲು ನಾಮೆಯಲ್ಲಿ ತನ್ನ ತಂದೆಯ ಸಹಿ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಪ್ರಸಾ.2ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು ತನ್ನ ಪಾಟೀ ಸವಾಲಿನಲ್ಲು ಕೂಡ ಪ್ರಸಾ.2 ನಿಶಾನೆ ಡಿ.1 ಉಯಿಲು ನಾಮೆಗೆ ತನ್ನ ತಂದೆ ದೃಢೀಕರಿಸಿದ ಸಾಕ್ಷಿಯಾಗಿ ಸಹಿ ಮಾಡಿದ್ದರು ಎನ್ನುವ ಸೂಚನೆಯನ್ನು ನಿರಾಕರಿಸಿ ತನ್ನ ತಂದೆ ಕನ್ನಡದಲ್ಲಿ ಸಹಿ ಮಾಡುತ್ತಿದ್ದರು

ಎಂದು ನುಡಿದಿರುತ್ತಾರೆ. ವಾದಿ ಪರ ವಕೀಲರು ಪ್ರಸಾ.2 ರವರಿಗೆ ತಮ್ಮ ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

ಪ್ರತಿವಾದಿಯರು ಬಾಗಲಕೋಟೆಯ ದಸ್ತಾವೇಜು ಬರಹಗಾರರಾದ ಓರ್ವ ಕೃಷ್ಣಮೂರ್ತಿ ಎನ್ನುವವರನ್ನು ಪ್ರಸಾ.3 ಎಂದು ಸಾಕ್ಷಿ ವಿಚಾರಣೆ ಮಾಡಿದ್ದು ಅವರು ತಮ್ಮ ಸಾಕ್ಷಿ ಹೇಳಿಕೆಯಲ್ಲಿ ತಾನು ಕಳೆದ 28 ವರ್ಷಗಳಿಂದ ಬಾಗಲಕೋಟೆಯಲ್ಲಿ ದಸ್ತಾವೇಜು ಬರಹಗಾರನಾಗಿ ಕೆಲಸ ಮಾಡುತ್ತಿದ್ದು ನಿಶಾನೆ ಡಿ.1 ಉಯಿಲು ನಾಮೆಯನ್ನು ತಾನು ರಂಗಣ್ಣ ಕೊಟ್ಟ ಮಾಹಿತಿಯ ಪ್ರಕಾರ ತಯಾರಿಸಿದ್ದೆ ಎಂದು ನುಡಿಯುತ್ತಾರೆ. ಪ್ರಸಾ.3 ಮುಂದುವರಿದು ದಿನಾಂಕ 27.09.2011ರಂದು ರಂಗಣ್ಣನವರು ಮಂಜಪ್ಪ ಮತ್ತು ವೆಂಕಪ್ಪ ಎನ್ನುವ ಇಬ್ಬರು ಸಾಕ್ಷಿಗಳೊಂದಿಗೆ ನಮ್ಮ ಕಛೇರಿಗೆ ಬಂದಿದ್ದು ಅವರ ಸಮಕ್ಷಮ ನಿಶಾನೆ ಡಿ.1 ಉಯಿಲು ನಾಮೆಯನ್ನು ರಂಗಣ್ಣನವರಿಗೆ ಓದಿ ಹೇಳಿದ್ದು ಅವರು ಅದಕ್ಕೆ ಸಹಿ ಮಾಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಸಾ.3 ನಿಶಾನೆ ಡಿ.1 ಉಯಿಲು ನಾಮೆಯ ಮೇಲೆ ದಿವಂಗತ ರಂಗಣ್ಣನ ಸಹಿ, ದೃಢೀಕರಿಸಿದ ಸಾಕ್ಷಿಗಳ ಸಹಿ ಮತ್ತು ದಸ್ತಾವೇಜು ಬರಹಗಾರನಾಗಿ ಇರುವ ತನ್ನ ಸಹಿಯನ್ನು ಕೂಡ ಗುರುತಿಸಿದ್ದಾರೆ.

ಪ್ರಸಾ.3 ತನ್ನ ಪಾಟೀ ಸವಾಲಿನಲ್ಲಿ ನಿಶಾನೆ ಡಿ.1 ಉಯಿಲು ನಾಮೆಯನ್ನು ಉಪ–ನೊಂದಣಾಧಿಕಾರಿ ಕಛೇರಿಗೆ ನೊಂದಣಿಗೆ ಕರೆದುಕೊಂಡು ಹೋಗುವಾಗ ತಾನು ಹಾಜರಿರಲಿಲ್ಲ ಎಂದು ಹೇಳುತ್ತಾರೆ. ಪ್ರಸಾ.3 ಆ ಉಯಿಲು ನಾಮೆಯನ್ನು ತಯಾರಿಸುವ ಕಾಲಕ್ಕೆ 1 ಮತ್ತು 2ನೇ ಪ್ರತಿವಾದಿಯರು ಹಾಜರಿದ್ದರು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಪ್ರಸಾ.3 ಅವರ ಕಛೇರಿಗೆ ದೃಢೀಕರಿಸಿದ ಸಾಕ್ಷಿಗಳನ್ನು ಕರೆದುಕೊಂಡು ಬಂದವರು ಯಾರು ಎಂದು ತನಗೆ ಹೇಳಲಾಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಸಾ.3 ನಿಶಾನೆ ಡಿ.1ಕ್ಕೆ ದೃಢೀಕರಿಸಿದ ಸಾಕ್ಷಿಯಾಗಿ ಸಹಿ ಮಾಡಿರುವ ಶ್ರೀ ವೆಂಕಪ್ಪ ಎನ್ನುವವರು ತನ್ನ ಕಛೇರಿಯ ಹತ್ತಿರ ಒಂದು ಸಣ್ಣ ಅಂಗಡಿಯನ್ನು ನಡೆಸಿಕೊಂಡು ಬರುತ್ತಿದ್ದು ತಾನು ತಯಾರಿಸಿದ ಬಹಳಷ್ಟು ದಸ್ತಾವೇಜುಗಳಿಗೆ ಅವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದು ಒಪ್ಪಿಕೊಳ್ಳುತ್ತಾರೆ. ಪ್ರಸಾ.3 ಉಯಿಲು ನಾಮೆ ತಯಾರಿಸಲು ನನಗೆ ಮಾಹಿತಿ ಕೊಡಲು ರಂಗಣ್ಣ ಅವರು ಉತ್ತಮ ಮಾನಸಿಕ ಸ್ಥಿತಿಯಲ್ಲಿ ಇರಲಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸುತ್ತಾರೆ. ಪ್ರಸಾ.3 ಆ ಉಯಿಲು ನಾಮೆಯನ್ನು ತಾನು 1 ಮತ್ತು 2ನೇ ಪ್ರತಿವಾದಿಯರ ಮಾಹಿತಿಯ ಮೇರೆಗೆ ತಯಾರಿಸಿದ್ದೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

ಪ್ರತಿವಾದಿಯರು ದಿನಾಂಕ 27.09.2011ರ ನೊಂದಾಯಿತ ಉಯಿಲು ನಾಮೆಯನ್ನು ನಿಶಾನೆ ಡಿ.1ರಂತೆ ಹಾಜರು ಪಡಿಸಿದ್ದು ಅದರಲ್ಲಿ ದಾವಾ ಆಸ್ತಿಯು ರಂಗಣ್ಣನ ಸ್ವಯಾರ್ಜಿತ ಆಸ್ತಿ ಮತ್ತು ಆತನ ವೃದ್ಧಾಪ್ಯದಲ್ಲಿ ಆತನನ್ನು ಪ್ರತಿವಾದಿಯರು ನೋಡಿಕೊಂಡಿದ್ದು ಮತ್ತು ಅವರು ವಾದಿಯ ಮದುವೆಯನ್ನು ಸಾಲ ಮಾಡಿ ನೆರವೇರಿಸಿದ್ದು ಮತ್ತು ಆಕೆಗೆ ಮದುವೆ ಕಾಲದಲ್ಲಿ ಹಣ ಮತ್ತು ಆಭರಣಗಳನ್ನು ನೀಡಲಾಗಿದ್ದು ಆಕೆ ತನ್ನ ಗಂಡನ ಮನೆಯಲ್ಲಿ ಆರಾಮವಾಗಿ ವಾಸ ಮಾಡಿಕೊಂಡಿದ್ದು ತನ್ನ ಸ್ವಂತ ಇಚ್ಛೆ ಮತ್ತು ಪ್ರೀತಿ ವಿಶ್ವಾಸದ ಕಾರಣ ತಾನು ದಾವಾ ಆಸ್ತಿಯನ್ನು ಪ್ರತಿವಾದಿಯರ ಪರವಾಗಿ ಉಯಿಲು ಮಾಡುತ್ತಿರುವುದಾಗಿ ಬರೆಸಲಾಗಿದೆ. ನಿಶಾನೆ ಡಿ.2 ದಿವಂಗತ ರಂಗಣ್ಣರವರ ಮರಣ ಪ್ರಮಾಣ ಪತ್ರವಾಗಿದ್ದು ಅದು ಅವರು ದಿನಾಂಕ 31.10.2011ರಂದು ಮೃತಪಟ್ಟಿದ್ದರು ಎಂದು ತೋರಿಸುತ್ತದೆ.

<u>ವಾದಿಯ ಪರ ವಾದದ ಮುಖ್ಯಾಂಶಗಳು</u>

- ವಾದಿ ಮತ್ತು ಪ್ರತಿವಾದಿಯರ ನಡುವಿನ ಸಂಬಂಧದ ಬಗ್ಗೆ ಮತ್ತು ಅವರ ಕುಟುಂಬಕ್ಕೆ ಮುದೋಳದಲ್ಲಿ ಪಿತ್ರಾರ್ಜಿತ ಆಸ್ತಿ ಇರುವ ಬಗ್ಗೆ ಯಾವುದೇ ಬಿನ್ನಾಭಿಪ್ರಾಯವಿರುವುದಿಲ್ಲ.
- ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿರುವುದು ಮತ್ತು ಕೆಲವೇ ತಿಂಗಳಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿರುವ ಬಗ್ಗೆ ಕೂಡ ಯಾವುದೇ ಬಿನ್ನಾಭಿಪ್ರಾಯವಿರುವುದಿಲ್ಲ. 2ನೇ ಪ್ರತಿವಾದಿ/ಪ್ರಸಾ.1 ಮುದೋಳದಲ್ಲಿರುವ ಪಿತ್ರಾರ್ಜಿತ ಆಸ್ತಿಯಿಂದ ಅದು ಮಾರಾಟವಾಗುವವರೆಗೆ ಕೃಷಿ ಆಧಾಯವನ್ನು ತನ್ನ ತಂದೆ ರಂಗಣ್ಣ ಪಡೆಯುತ್ತಿದ್ದರು ಎಂದು ಒಪ್ಪಿಕೊಂಡಿರುತ್ತಾರೆ.
- ದಾವಾ ಆಸ್ತಿಯನ್ನು ಪಿತ್ರಾರ್ಜಿತ ಆಸ್ತಿ ಮಾರಾಟ ಮಾಡಿದ ಹಣದಿಂದ ಖರೀದಿ ಮಾಡಿದ ಆಸ್ತಿ ಎಂದು ಸಾಬೀತು ಪಡಿಸುವ ಆರಂಬಿಕ ಹೊಣೆಗಾರಿಕೆಯನ್ನು ವಾದಿಯು ನಿಬಾಯಿಸಿದ್ದು ಪ್ರತಿವಾದಿಯರು ದಾವಾ ಆಸ್ತಿಯನ್ನು ಅವರ ತಂದೆ ಅವರ ಸ್ವಂತ ಆಧಾಯದಿಂದ ಖರೀದಿ ಮಾಡಿದ್ದರು ಎಂದು ಸಾಬೀತು ಪಡಿಸಬೇಕಾಗಿರುತ್ತದೆ. ಆದರೆ ಪ್ರತಿವಾದಿಯರು ಅದನ್ನು ಸಾಬೀತು ಪಡಿಸಲು ಯಾವುದೇ ಸಾಕ್ಷ್ಯ ನೀಡಿರುವುದಿಲ್ಲ.
- 3ನೇ ವಿವಾದಾಂಶವನ್ನು ಸಾಬೀತು ಪಡಿಸುವ ಭಾರ ಪ್ರತಿವಾದಿಯರ ಮೇಲೆ ಇರುತ್ತದೆ. ಭಾರತೀಯ ಉತ್ತರಾಧಿಕಾರ ಅಧಿನಿಯಮ 1925ರ ಕಲಂ ____ ಒಂದು ಉಯಿಲು ನಾಮೆಯನ್ನು ಯಾವ ರೀತಿ ಬರೆಯಬೇಕು ಎಂದು ವಿವರಿಸುತ್ತದೆ. ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ ____ ಒಂದು ಉಯಿಲು ನಾಮೆ ಬರೆದಿರುವುದನ್ನು ಯಾವ ರೀತಿ ಸಾಬೀತು ಪಡಿಸಬೇಕು ಎಂದು ವಿವರಿಸುತ್ತದೆ. ಈ ಮೇಲಿನ ನಿಭಂದನೆಗಳ ಪ್ರಕಾರ ಒಂದು ಉಯಿಲು ನಾಮೆಯನ್ನು ಅದನ್ನು ಬರೆದುಕೊಟ್ಟವರು ಸಹಿ ಮಾಡಿರುವುದನ್ನು ನೋಡಿರುವ ಕನಿಷ್ಟ ಇಬ್ಬರು ಸಾಕ್ಷಿದಾರರು

ದೃಢೀಕರಿಸಬೇಕಾಗುತ್ತದೆ ಮತ್ತು ಅದನ್ನು ಸಾಬೀತು ಪಡಿಸಲು ಕನಿಷ್ಟ ಓರ್ವ ದೃಢೀಕರಿಸಿದ ಸಾಕ್ಷಿಯನ್ನು ವಿಚಾರಣೆ ಮಾಡಬೇಕಾಗುತ್ತದೆ. ಪ್ರತಿವಾದಿಯರು ನಿಶಾನೆ ಡಿ.1 ಉಯಿಲು ನಾಮೆಯನ್ನು ದೃಢೀಕರಿಸಿದ ಇಬ್ಬರು ಸಾಕ್ಷಿಗಳನ್ನು ವಿಚಾರಣೆ ಮಾಡಿರುವುದಿಲ್ಲ.

- ಓರ್ವ ದೃಢೀಕರಿಸಿದ ಸಾಕ್ಷಿಯ ಮಗನನ್ನು ಪ್ರಸಾ.2 ಎಂದು ಸಾಕ್ಷಿ ವಿಚಾರಣೆ ಮಾಡಿದ್ದರೂ ಕೂಡ ಆತ ತನ್ನ ತಂದೆಯ ಸಹಿಗಳನ್ನು ಗುರುತಿಸಿರುವುದಿಲ್ಲ. ಆದುದರಿಂದ ಪ್ರಸಾ.2 ರವರ ಸಾಕ್ಷ್ಯ ನಿಶಾನೆ ಡಿ.1 ಉಯಿಲು ನಾಮೆಯನ್ನು ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ _____ನ ಪ್ರಕಾರ ಸಾಬೀತು ಪಡಿಸಲು ಪ್ರತಿವಾದಿಯರಿಗೆ ಸಹಾಯವಾಗುವುದಿಲ್ಲ.
- ಪ್ರಸಾ.3 ಓರ್ವ ದಸ್ತಾವೇಜು ಬರಹಗಾರನಾಗಿರುವ ಕಾರಣ ಆತನ ಸಾಕ್ಷಿಯನ್ನು ನಿಶಾನೆ ಡಿ.1 ಉಯಿಲು ನಾಮೆಯನ್ನು ಸಾಬೀತು ಪಡಿಸಲು ಪರಿಗಣಿಸಲಾಗುವುದಿಲ್ಲ. ಭಾರತೀಯ ಸಾಕ್ಷ್ಯ ಅಧಿನಿಯಮ 1872ರ ಕಲಂ ___ ಪ್ರಕಾರ ಉಯಿಲು ನಾಮೆಯನ್ನು ಸಾಬೀತು ಪಡಿಸಲು ಕನಿಷ್ಟ ಓರ್ವ ದೃಢೀಕರಿಸಿದ ಸಾಕ್ಷಿಗಳನ್ನು ವಿಚಾರಣೆ ಮಾಡಬೇಕು ಎಂದು ಕಡ್ಡಾಯ ಮಾಡಿರುವಾಗ ದಸ್ತಾವೇಜು ಬರಹಗಾರನ ಸಾಕ್ಷ್ಯವನ್ನು ಉಯಿಲು ನಾಮೆ ಬರೆದಿರುವುದನ್ನು ಸಾಬೀತು ಪಡಿಸಲು ಪರಿಗಣಿಸಲಾಗುವುದಿಲ್ಲ.
- ನಿಶಾನೆ ಡಿ.1 ಉಯಿಲು ನಾಮೆಯ ಬಗ್ಗೆ ಅನುಮಾನಸ್ಪದ ಸಂದರ್ಭಗಳು ಇದ್ದು ದಿವಂಗತ ರಂಗಣ್ಣನ ಸ್ವಾಭಾವಿಕ ವಾರಸುದಾರರ ಪೈಕಿ ಒಬ್ಬಳಾದ ಅಂದರೆ ವಾದಿಯನ್ನು ಯಾವುದೇ ಸೂಕ್ತ ಕಾರಣಗಳು ಇಲ್ಲದೇ ಆಸ್ತಿಯನ್ನು ಪಡೆಯಲು ಕೈಬಿಟ್ಟಿರುವುದರಿಂದ ಮತ್ತು ಉಯಿಲು ನಾಮೆಯ ಫಲಾನುಭವಿಗಳು ಉಯಿಲು ನಾಮೆಯನ್ನು ಬರೆಯುವ ಕಾಲಕ್ಕೆ ಸ್ವತಃ ಹಾಜರಿರುವುದರಿಂದ ಇದೊಂದು ಅಸ್ವಾಭಾವಿಕ ಉಯಿಲು ನಾಮೆಯಾಗಿರುತ್ತದೆ.

<u>ಪ್ರತಿವಾದಿಯರ ಪರ ವಾದದ ಮುಖ್ಯಾಂಶಗಳು</u>

- ವಾದಿ/ವಾಸಾ.1 ಆಕೆಯ ಮದುವೆಯನ್ನು ಮಾಡಲು ಆಕೆಯ ತಂದೆ ತಮ್ಮ ಕುಟುಂಬದ ಸ್ನೇಹಿತರಿಂದ ಸಾಲ ಪಡೆದಿದ್ದರು ಎಂದು ಒಪ್ಪಿಕೊಂಡಿರುತ್ತಾರೆ.
- ಪ್ರತಿವಾದಿಯರು ಮತ್ತು ಅವರ ತಂದೆ ರಂಗಣ್ಣ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿರುವುದು ವಾದಿಯ ಮದುವೆಯಾದ ಕೆಲವೇ ತಿಂಗಳಲ್ಲಿ ಮತ್ತು ಅದು ಸಾಲ ಮರುಪಾವತಿಗಾಗಿ.
- ವಾದಿ/ವಾಸಾ.1 ಆಕೆಯ ತಂದೆ ಏಪ್ರಿಲ್ 2003ರಲ್ಲಿ ನಿವೃತ್ತಿಯಾಗಿದ್ದರು ಮತ್ತು ಸಾಕಷ್ಟು ನಿವೃತ್ತಿಯ ಹಣವನ್ನು ಪಡೆದುಕೊಂಡಿದ್ದರು ಎಂದು ಒಪ್ಪಿಕೊಂಡಿರುತ್ತಾರೆ. ದಾವಾ ಆಸ್ತಿಯನ್ನು ಖರೀದಿ

ಮಾಡಿರುವುದು ರಂಗಣ್ಣ ನಿವೃತ್ತಿಯಾದ ಕೆಲವೇ ತಿಂಗಳಲ್ಲಿ ಮತ್ತು ನಿವೃತ್ತಿ ಕಾಲದಲ್ಲಿ ಗಳಿಸಿದ ಹಣದಿಂದ.

- ದಾವಾ ಆಸ್ತಿಯನ್ನು ಪಿತ್ರಾರ್ಜಿತ ಆಸ್ತಿಯ ಮಾರಾಟದ ಹಣದಿಂದ ಖರೀದಿ ಮಾಡಿದ್ದಲ್ಲಿ ಅದನ್ನು ಪ್ರತಿವಾದಿ ಮತ್ತು ಅವರ ತಂದೆ ರಂಗಣ್ಣನವರ ಜಂಟಿ ಹೆಸರಲ್ಲಿ ಖರೀದಿ ಮಾಡುತ್ತಿದ್ದರು.
- ರಂಗಣ್ಣನವರಿಗೆ ಸ್ವಯಾರ್ಜಿತ ಆಧಾಯ ಇರುವುದನ್ನು ಒಪ್ಪಿಕೊಂಡಿರುವುದರಿಂದ ಮತ್ತು ಆಸ್ತಿಯನ್ನು ಆತನ ಒಬ್ಬನ ಹೆಸರಲ್ಲಿ ಮಾತ್ರ ಖರೀದಿ ಮಾಡಿರುವುದರಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿರುವುದು ಅವರ ಸ್ವಂತ ಆಧಾಯದಿಂದ ಎಂದು ಪರಿಗಣಿಸಬೇಕಾಗುತ್ತದೆ ಮತ್ತು ದಾವಾ ಆಸ್ತಿಯನ್ನು ಪಿತ್ರಾರ್ಜಿತ ಆಸ್ತಿಯ ಮಾರಾಟದಿಂದ ಖರೀದಿ ಮಾಡಲಾಗಿದೆ ಎಂದು ಸಾಬೀತು ಪಡಿಸುವ ಭಾರ ವಾದಿಯ ಮೇಲೆ ಇರುತ್ತದೆ. ಆದರೆ ವಾದಿಯು ಅದನ್ನು ಸಾಬೀತು ಪಡಿಸಲು ಯಾವುದೇ ಸಾಕ್ಷ್ಯ ನೀಡಿರುವುದಿಲ್ಲ.
- ನಿಶಾನೆ ಡಿ.1 ಉಯಿಲು ನಾಮೆಯನ್ನು ಸಾಬೀತು ಪಡಿಸಲು ಇಬ್ಬರು ದೃಢೀಕರಿಸಿದ ಸಾಕ್ಷಿಗಳು ಲಭ್ಯವಿಲ್ಲದ ಕಾರಣ ಪ್ರತಿವಾದಿಯರು ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ ____ ನ್ನು ಉಲ್ಲೇಖಿಸಿರುತ್ತಾರೆ.
- ಪ್ರಸಾ.2 ನಿಶಾನೆ ಡಿ.1 ರಲ್ಲಿನ ತನ್ನ ತಂದೆಯ ಸಹಿಯನ್ನು ಗುರುತಿಸದೆ ಪ್ರತಿವಾದಿಯರಿಗೆ ಬೆಂಬಲ ಕೊಡದೇ ಇದ್ದರೂ ಕೂಡ ನಿಶಾನೆ ಡಿ.1 ಉಯಿಲು ನಾಮೆಯನ್ನು ಸಾಬೀತು ಪಡಿಸಲು ಪ್ರಸಾ.3 ರವರ ಸಾಕ್ಷ್ಯ ಇರುತ್ತದೆ. ಪ್ರಸಾ.3 ರವರು ತನ್ನ ಸಾಕ್ಷ್ಯದಲ್ಲಿ ರಂಗಣ್ಣರವರು ನಿಶಾನೆ ಡಿ.1 ಉಯಿಲು ನಾಮೆಯನ್ನ ಬರೆದಿರುವ ಬಗ್ಗೆ ಸಾಕ್ಷಿ ನುಡಿದು ಆತನ ಮತ್ತು ಇಬ್ಬರು ದೃಢೀಕರಿಸಿದ ಸಾಕ್ಷಿಗಳ ಸಹಿಗಳನ್ನು ಗುರುತಿಸಿರುತ್ತಾರೆ. ಆದುದರಿಂದ ಪ್ರಸಾ.3 ರವರ ಸಾಕ್ಷ್ಯವನ್ನು ಭಾರತೀಯ ಸಾಕ್ಷ್ಯ ಅಧಿನಿಯಮ, 1872 ಕಲಂ _____ರ ಅಡಿಯಲ್ಲಿ ಅಗತ್ಯ ಇರುವ ಸಾಕ್ಷಿಯ ಸಾಕ್ಷ್ಯ ಎಂದು ಪರಿಗಣಿಸಬಹುದು.
- ನಿಶಾನೆ ಡಿ.1 ಉಯಿಲು ನಾಮೆಯಲ್ಲಿ ಬರೆದಿರುವ ವಿಷಯಗಳು ಪ್ರತಿವಾದಿಯರ ಪರವಾಗಿ ಮಾತ್ರ ದಾವಾ ಆಸ್ತಿಯನ್ನು ಉಯಿಲು ಮಾಡಲು ಮತ್ತು ವಾದಿಯನ್ನು ಹೊರತುಪಡಿಸಲು ಸೂಕ್ತ ವಿವರಣೆಯನ್ನು ನೀಡುತ್ತವೆ. ಆದುದರಿಂದ ಅದು ಅಸ್ವಾಭಾವಿಕ ಉಯಿಲು ನಾಮೆ ಆಗಿರುವುದಿಲ್ಲ. ಪ್ರತಿವಾದಿಯರ ಪರವಾಗಿ ಬರೆದಿರುವ ನಿಶಾನೆ ಡಿ.1 ಉಯಿಲು ನಾಮೆಯ ಸುತ್ತ ಯಾವುದೇ ಅನುಮಾನಾಸ್ಪದ ಸಂದರ್ಭಗಳು ಇರುವುದಿಲ್ಲ.

******